## ಸರ್ವ ಶಿಕ್ಷಣ ಅಭಿಯಾನ ಮಿಷನ್ – ಕರ್ನಾಟಕ
## ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-1

ಸಂಖ್ಯೆ : ಸ.ಶಿ.ಅ/ಹೆ.ಶಿ/ಮಾ.ಸೂ/9/2009-10

ದಿನಾಂಕ :24.06.2009

### ಸುತ್ತೋಲೆ

**ವಿಷಯ: ಪ್ರಾಥಮಿಕ ಹಂತದಲ್ಲಿ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ರಾಷ್ಟ್ರೀಯ ಕಾರ್ಯಕ್ರಮವನ್ನು (NPEGEL) 2009-10ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲು ಮಾರ್ಗಸೂಚಿ.**

**ಉಲ್ಲೇಖ: ಎಂ.ಹೆಚ್.ಆರ್.ಡಿ., ನವದೆಹಲಿ ಪತ್ರ ಸಂಖ್ಯೆ:2/2-11/2009-ಇಇ3 ದಿ: 22.4.09.**

*****

ಪ್ರಾಥಮಿಕ ಹಂತದ ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ಶೈಕ್ಷಣಿಕವಾಗಿ ಹಿಂದುಳಿದ ತಾಲ್ಲೂಕುಗಳಲ್ಲಿ ಎನ್.ಪಿ.ಇ.ಜಿ.ಇ.ಎಲ್. ಕಾರ್ಯಕ್ರಮವನ್ನು 2009-10ನೇ ಸಾಲಿನಲ್ಲಿ ಅನುಷ್ಠಾನಗೊಳಿಸುವ ಉದ್ದೇಶದಿಂದ ದಿ. 25.2.2009 ರಂದು ನವದೆಹಲಿಯಲ್ಲಿ ನಡೆದ ಸರ್ವ ಶಿಕ್ಷಣ ಅಭಿಯಾನ ಯೋಜನಾ ಅನುಮೋದನಾ ಸಭೆಯಲ್ಲಿ ರೂ.587.872 ಲಕ್ಷಗಳ ಅನುದಾನವನ್ನು ಈ ಕಾರ್ಯಕ್ರಮಕ್ಕೆ ಅನುಮೋದಿಸಿದೆ. 2009-10ನೇ ಸಾಲಿನಲ್ಲಿ ರಾಜ್ಯದ 62 ಶೈಕ್ಷಣಿಕವಾಗಿ ಹಿಂದುಳಿದ ಬ್ಲಾಕ್‌ಗಳಲ್ಲಿನ ಎಲ್ಲಾ 917 ಕ್ಲಸ್ಟರ್‌ಗಳು ಹಾಗೂ 4 ನಗರ ಸ್ಲಮ್‌ಗಳಲ್ಲಿ (ಮಹಿಳಾ ಸಮಾಖ್ಯಾ ನಡೆಸುತ್ತಿರುವ 108 ಕ್ಲಸ್ಟರ್‌ಗಳೂ ಸೇರಿದಂತೆ) ಎನ್.ಪಿ.ಇ.ಜಿ.ಇ.ಎಲ್ ಕಾರ್ಯಕ್ರಮದ ಅನುಮೋದಿತ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಬೇಕಾಗಿದೆ.

ಈ ಸಾಲಿನಲ್ಲಿನ ಕೇಂದ್ರ ಹಾಗೂ ರಾಜ್ಯ ಪಾಲಿನ 2009-10ನೇ ಸಾಲಿನ ಎನ್.ಪಿ.ಇ.ಜಿ.ಇ.ಎಲ್. ಪೂರ್ಣ ಅನುದಾನವನ್ನು ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗುತ್ತದೆ. ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗುವ ಅನುದಾನದ ವಿವರ ಕೆಳಕಂಡಂತೆ ಇರುತ್ತದೆ.

| ಕ್ರ. ಸಂ. | ಜಿಲ್ಲೆಗಳು | ಎನ್.ಪಿ.ಇ.ಜಿ.ಇ.ಎಲ್ ಕ್ಲಸ್ಟರ್‌ಗಳು | | | | 2009-10 ನೇ ಸಾಲಿಗೆ ಅನುಮೋದಿತ ಅನುದಾನ ಪ್ರತಿ ಎಂ.ಸಿ.ಎಸ್ ಶಾಲೆಗೆ ತಲಾ ರೂ. 63,830/- ರೂ ಲಕ್ಷಗಳಲ್ಲಿ. |
|---|---|---|---|---|---|---|
| | | ಸ.ಶಿ.ಅ. | ನಗರ ಸ್ಲಂಗಳು | ಮಹಿಳಾ ಸಾಮಖ್ಯ | ಒಟ್ಟು | |
| 1 | ಬಾಗಲಕೋಟೆ | 59 | 0 | 9 | 68 | 43.40423 |
| 2 | ರಾಮನಗರ | 13 | 1 | 0 | 14 | 8.936165 |
| 3 | ಬೆಳಗಾಂ | 43 | 0 | 0 | 43 | 27.44679 |
| 4 | ಬಳ್ಳಾರಿ | 73 | 0 | 11 | 84 | 53.61699 |
| 5 | ಬೀದರ್ | 51 | 0 | 14 | 65 | 41.48934 |
| 6 | ಬಿಜಾಪುರ | 71 | 0 | 28 | 99 | 63.19145 |
| 7 | ಚಿತ್ರದುರ್ಗ | 28 | 0 | 0 | 28 | 17.87233 |
| 9 | ದಾವಣಗೆರೆ | 16 | 0 | 0 | 16 | 10.21276 |
| 10 | ಧಾರವಾಡ | 28 | 1 | 0 | 29 | 18.51063 |
| 11 | ಗದಗ | 16 | 0 | 0 | 16 | 10.21276 |
| 12 | ಗುಲ್ಬರ್ಗ | 119 | 0 | 28 | 147 | 93.82973 |
| 13 | ಹಾಸನ | 21 | 0 | 0 | 21 | 13.40425 |
| 14 | ಚಿಕ್ಕಬಳ್ಳಾಪುರ | 57 | 0 | 0 | 57 | 36.38296 |

| | | | | | | |
|---|---|---|---|---|---|---|
| 15 | ಕೋಲಾರ | 63 | 0 | 0 | 63 | 40.21274 |
| 16 | ಕೊಪ್ಪಳ | 50 | 0 | 12 | 62 | 39.57445 |
| 17 | ಮೈಸೂರು | 16 | 1 | 0 | 17 | 10.85106 |
| 19 | ರಾಯಚೂರು | 71 | 0 | 6 | 77 | 49.14891 |
| 20 | ತುಮಕೂರು | 14 | 0 | 0 | 14 | 8.936165 |
| 21 | ಬೆಂಗಳೂರು ನಗರ | 0 | 1 | 0 | 1 | 0.638298 |
| | **ಒಟ್ಟು** | **809** | **4** | **108** | **921** | **587.872** |

**ಈ ಅನುದಾನವನ್ನು ಇಲಾಖೆಯಿಂದ ನಿರ್ವಹಿಸಲ್ಪಡುತ್ತಿರುವ ಮಾದರಿ ಕ್ಲಸ್ಟರ್ ಶಾಲೆಗಳಿಗೆ ಜಿಲ್ಲಾ ಹಂತದಿಂದ ಕೂಡಲೆ ಬಿಡುಗಡೆ ಮಾಡುವುದು. ಮಹಿಳಾ ಸಮಾಖ್ಯದ ಮಾದರಿ ಕ್ಲಸ್ಟರ್ ಶಾಲೆಗಳಿಗೆ ಸಂಬಂಧಿಸಿದಂತೆ ಅನುದಾನವನ್ನು ಮ.ಸ.ಕ ರಾಜ್ಯ ಕಛೇರಿಗೆ ಬಿಡುಗಡೆ ಮಾಡಲಾಗುವುದು. ಕಾರ್ಯ ಚಟುವಟಿಕೆಗಳನ್ನು ನಿಯಮಿತ ಅವಧಿಯಲ್ಲಿ ಜಾರಿಗೊಳಸಿ ಪೂರ್ಣ ಅನುದಾನವನ್ನು ಬಳಸಿಕೊಳ್ಳಲು ಸೂಚಿಸಲಾಗಿದೆ.**

ಅನುಮೋದಿತವಾಗಿರುವ ಚಟುವಟಿಕೆ/ಉಪಚಟುವಟಿಕೆ; ಪ್ರತಿ ಕ್ಲಸ್ಟರಿಗೆ ಮಂಜೂರಾಗಿರುವ ಅನುದಾನ ಮತ್ತು ಅನುಷ್ಠಾನಗೊಳಿಸಬೇಕಾದ ಸ್ಥೂಲ ವಿವರವನ್ನು ಮುಂದಿನಂತೆ ನೀಡಲಾಗಿದೆ. ಕ್ಲಸ್ಟರ್ ಹಂತದ ಎನ್.ಪಿ.ಇ.ಜಿ.ಇ.ಎಲ್. ಸಮಿತಿಯಲ್ಲಿ ಈ ವಿಷಯವನ್ನು ಮಂಡನೆ ಮಾಡಿ 2009-10ರಲ್ಲಿ ನಿರ್ವಹಿಸುವ ಕಾರ್ಯಯೋಜನೆ ತಯಾರಿಸಿ ವಿವಿಧ ಶಾಲೆಗಳಲ್ಲಿ ಈ ಚಟುವಟಿಕೆಗಳನ್ನು ಅನುಷ್ಠಾನಗೊಳಿಸತಕ್ಕದ್ದು. **ಮಹಿಳಾ ಸಮಾಖ್ಯಾದ ಕ್ಲಸ್ಟರ್‌ಗಳಲ್ಲಿ ಕೂಡ ಇದೇ ವಿಧಾನವನ್ನು ಅನುಸರಿಸತಕ್ಕದ್ದು.**

**ಅ. ಶಾಲಾ ನಿರ್ವಹಣೆ/ವೃತ್ತಿ ಕೌಶಲ್ಯ ಬೆಳವಣಿಗೆ:** **ಒಟ್ಟು ಅನುದಾನ – ರೂ.15,000/-**

ಈ ಅನುದಾನವನ್ನು ವಿದಾರ್ಥಿಗಳಲ್ಲಿ ವೃತ್ತಿ ಕೌಶಲ್ಯದ ಬೆಳವಣಿಗೆ ಹಾಗೂ ಕಾರ್ಯಾನುಭವದಲ್ಲಿ ಸೂಚಿಸಲಾಗಿರುವ ವಸ್ತುಗಳ ತಯಾರಿಕೆಗೆ ಈ ಹಣವನ್ನು ಬಳಸಬಹುದು. ವಸ್ತುಗಳ ತಯಾರಿಕೆಗೆ ಬೇಕಾದ ಸಾಮಗ್ರಿ ಖರೀದಿಗೆ, ವೃತ್ತಿ ನೈಪುಣ್ಯತೆಯುಳ್ಳ ಸಂಪನ್ಮೂಲ ವ್ಯಕ್ತಿಗಳಿಗೆ ಗೌರವಧನ ನೀಡಲು ಈ ಹಣವನ್ನು ಬಳಕೆ ಮಾಡಬಹುದು. ಜೊತೆಗೆ ಮಕ್ಕಳು ತಯಾರಿಸಿದ ಸಾಮಗ್ರಿ ಪ್ರದರ್ಶನ ಮತ್ತು ಮಾರಾಟದಂತಹ ಮೇಳಗಳ ಆಯೋಜನೆಗೆ ಕೂಡ ಈ ಹಣ ಬಳಸಬಹುದು.

ಈ ಹಣದ ಬಳಕೆಯನ್ನು **ಕನಿಷ್ಠ 03 ಮಾದರಿ ಕ್ಲಸ್ಟರ್ ಶಾಲೆಯ** ಮಕ್ಕಳ ವೃತ್ತಿ ಕೌಶಲ್ಯ ಅಭಿವೃದ್ಧಿಗಾಗಿ ಬಳಸಬಹುದು. ಯಾವ ಶಾಲೆಗಳಲ್ಲಿ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಬೇಕೆಂದು ಎನ್.ಪಿ.ಇ.ಜಿ.ಇ.ಎಲ್. ಕ್ಲಸ್ಟರ್ ಸಮಿತಿಯಲ್ಲಿ ತೀರ್ಮಾನ ಮಾಡುವುದು. ಈ ಸಮಿತಿಯ ಸ್ವರೂಪವನ್ನು 2008-09ರ ಎನ್.ಪಿ.ಇ.ಜಿ.ಇ.ಎಲ್. ಕೈಪಿಡಿಯಲ್ಲಿ ನೀಡಲಾಗಿದೆ.

ವೃತ್ತಿ ನೈಪುಣ್ಯತೆಯುಳ್ಳ ಸಂಪನ್ಮೂಲ ವ್ಯಕ್ತಿಗಳನ್ನು ಒಂದು ಶಾಲೆಗೆ **ಗರಿಷ್ಠ** 04 ತಿಂಗಳ ಅವಧಿಗಾಗಿ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳತಕ್ಕದ್ದು. ಇವರ ಸೇವೆಯನ್ನು 01 ವಾರ ಸ್ಥಗಿತಗೊಳಿಸಿ ಬೇರೊಂದು ಶಾಲೆಯ ಈ ಚಟುವಟಿಕೆಗೆ ಅವರ ಸೇವೆ ಬಳಸಬಹುದು. ಎಸ್.ಡಿ.ಎಂ.ಸಿ.ಯಾಗಲಿ ಅಥವ ಶಾಲೆಗಳಾಗಲಿ ಇಂತಹ ಸಂಪನ್ಮೂಲ ವ್ಯಕ್ತಿಗಳನ್ನು ನೇರವಾಗಿ ನೇಮಕ ಮಾಡಿಕೊಳ್ಳಬಾರದು. ಈ ಕಾರ್ಯ ಚಟುವಟಿಕೆ ನಡೆಸಲು ಆಯ್ಕೆ ಮಾಡಿಕೊಂಡ ಶಾಲೆಗಳಲ್ಲಿ 09-10ನೇ ಸಾಲಿನಲ್ಲಿ **03 ವೃತ್ತಿ ಕೌಶಲ್ಯಗಳನ್ನು** ಬೆಳೆಸಲು ಕ್ರಮ ಮಾಡತಕ್ಕದ್ದು. ಇದರ ಜೊತೆಗೆ ಕಾರ್ಯಾನುಭವದ ಕೆಲವು ವಸ್ತುಗಳನ್ನು ತಯಾರಿಸುವ ಕೌಶಲ್ಯವನ್ನು ಕೂಡ ಬೆಳೆಸಲು ಕ್ರಮ ಮಾಡುವುದು. ಈ ಕೌಶಲ್ಯಗಳ ಬೆಳವಣಿಗೆಗೆ 03/04 ದಿನಗಳ ತರಬೇತಿ(ಕೋಚಿಂಗ್) ಸಾಕು. ಇಂತಹ ಚಟುವಟಿಕೆಗಳಿಗೆ ಸಂಪನ್ಮೂಲ ವ್ಯಕ್ತಿಗಳು ಸ್ಥಳೀಯವಾಗಿ ಲಭ್ಯವಿಲ್ಲದಿದ್ದರೆ – ಬೇರೆ ಕಡೆಯಿಂದ ಕರೆಯಿಸಬಹುದು. ಅವರ ಪ್ರಯಾಣ ಮತ್ತು ಊಟದ ವೆಚ್ಚವನ್ನು ಈ ಅನುದಾನದಿಂದ ಭರಿಸಬಹುದು. ಇಂತಹ ಸಂಪನ್ಮೂಲ ವ್ಯಕ್ತಿಗಳ ಯಾದಿಯನ್ನು ಬಿ.ಇ.ಓ. ಮತ್ತು ಬಿ.ಆರ್.ಸಿ.ಯವರು ತಯಾರಿಸಿ ಜೂನ್ ತಿಂಗಳೊಳಗೆ ಮಾದರಿ ಕ್ಲಸ್ಟರ್ ಶಾಲೆಗಳಿಗೆ ನೀಡತಕ್ಕದ್ದು.

ಹಿಂದಿನ ವರ್ಷಗಳಲ್ಲಿ ಮಕ್ಕಳು ತಯಾರಿಸಿದ ವಸ್ತುಗಳ ಮಾರಾಟದಿಂದ ಬಂದ ಹಣವನ್ನು ಶಾಲಾ ಅಕೌಂಟ್ ನಲ್ಲಿಡಲು ಸೂಚಿಸಲಾಗಿತ್ತು. ಈ ವರ್ಷದಲ್ಲಿ ಇದೇ ಕ್ರಮ ಅನುಸರಿಸುವುದು. ಈ ವರ್ಷದ ಚಟುವಟಿಕೆಗಳಿಗೆ ಕಡಿಮೆ ಬೀಳುವ ಹಣವನ್ನು ಈ ನಿಧಿಯಿಂದ ಭರಿಸಬಹುದು.

✓ **ಮಕ್ಕಳಲ್ಲಿ ಬೆಳಿಸಬಹುದಾದ ವೃತ್ತಿ ಕೌಶಲ್ಯಗಳು :**
ಬಟ್ಟೆ ಹೊಲಿಯುವುದು; ನೂಲುವುದು ; ನೇಯ್ಗೆ ; ಕಸೂತಿ ; ಸೈಕಲ್, ಟಿ.ವಿ., ರೇಡಿಯೋ, ಮೊಬೈಲ್, ವಿದ್ಯುತ್ ಉಪಕರಣಗಳು – ಇತ್ಯಾದಿ ವಸ್ತುಗಳ ರಿಪೇರಿ ; ಎರೆಹುಳು ಗೊಬ್ಬರ ; ಜೇನು ಕೃಷಿ ; ಅಕ್ವೇರಿಯಂ ನಿರ್ವಹಣೆ ; ಕಸಿ ಮಾಡುವುದು ; ಬಡಗಿ ಕೆಲಸದ ಕೌಶಲ್ಯ ; ವಿದ್ಯುತ್ ವೈರಿಂಗ್ ; ಬ್ಯೂಟೀಶಿಯನ್ ಕೌಶಲ್ಯ ; ಅಣಬೆ ಕೃಷಿ – ಇತ್ಯಾದಿ ಕೌಶಲ್ಯಗಳು.

✓ **ಕಾರ್ಯಾನುಭವದ ಕೌಶಲ್ಯಗಳು :**
ವಿವಿಧ ಬಗೆಯ ಮಾಪಕಗಳು ; ಆಹಾರ ವಸ್ತುಗಳು ; ಶೃಂಗಾರ ವಸ್ತು ತಯಾರಿಕೆ ; ಮೇಣದಬತ್ತಿ ; ಸೀಮೆಸುಣ್ಣ ; ಆರೋಗ್ಯ ವರ್ಧಕಗಳು ; ಇತ್ಯಾದಿ ವಸ್ತುಗಳು.

**ಆ. ಉತ್ತಮ ಮೀನಾ ತಂಡಕ್ಕೆ ಬಹುಮಾನ:** **ಒಟ್ಟು ಅನುದಾನ – ರೂ. 5,000/-**

ಕಳೆದ ವರ್ಷ ಒಂದು ಮಾದರಿ ಕ್ಲಸ್ಟರ್ ಶಾಲೆಯಲ್ಲಿ ಕನಿಷ್ಠ 04 ಶಾಲೆಗಳಲ್ಲಿ ಮೀನಾ ತಂಡಗಳನ್ನು ರಚಿಸಬೇಕೆಂದು ತಿಳಿಸಲಾಗಿತ್ತು. ಇದರ ಮುಂದುವರಿಕೆಯಾಗಿ ಈ ಬಾರಿ ಎಲ್ಲಾ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಮೀನಾ ತಂಡವನ್ನು ರಚಿಸಿ ಕಾರ್ಯಾನುಷ್ಠಾನ ಮಾಡುವುದು.

ಉತ್ತಮ ಕಾರ್ಯ ನಿರ್ವಹಿಸಿದ ಮೀನಾ ತಂಡದ ಉಸ್ತುವಾರಿ ಶಿಕ್ಷಕರಿಗೆ ರೂ. 2000/- ರೂ ನಗದು ಬಹುಮಾನ ನೀಡುವುದು. ಹಾಗೂ ಉತ್ತಮ ಕಾರ್ಯ ನಿರ್ವಹಿಸಿದ ಮೀನಾ ತಂಡದ ಶಾಲೆಗೆ ರೂ.3000/- ನಗದು ಬಹುಮಾನ ನೀಡುವುದು. ಬಹುಮಾನವನ್ನು ಬ್ಲಾಕ್ ಹಂತದಲ್ಲಿ ಒಂದು ಯುಕ್ತವಾದ ಸಭೆ ಏರ್ಪಡಿಸಿ ನೀಡುವುದು. ಈ ಸಭೆಯ ಆಯೋಜನೆಗೆ ಪ್ರತಿ ಮಾದರಿ ಕ್ಲಸ್ಟರ್ ಶಾಲೆಯಿಂದ ರೂ.200/- ಮೀರದಂತೆ ಹಣ ವಸೂಲಿಸಿ ಖರ್ಚು ಭರಿಸುವುದು. ಮಾದರಿ ಕ್ಲಸ್ಟರ್ ಶಾಲೆಗಳ ಈ ಹಣವನ್ನು ಸಮುದಾಯ ಸಂಚಲನ ಕಾರ್ಯ ತಂತ್ರದಿಂದ ನೀಡಬಹುದು.

ಬಹುಮಾನ ಆಯ್ಕೆಯನ್ನು ಸಿ.ಎ.ಇ.ಓ., ಸಿ.ಆರ್.ಪಿ., ಇ.ಸಿ.ಓ. ಮತ್ತು ಬಿ.ಆರ್.ಪಿ., ಸಿ.ಜಿ.ಸಿ. ಹಾಗೂ ಆಯಾ ಶಾಲೆಯ ಮುಖ್ಯಸ್ಥರನ್ನೊಳಗೊಂಡ ಸಮಿತಿಯವರು ಮಾಡುತ್ತಾರೆ. ಈ ಆಯ್ಕೆಯು ಫೆಬ್ರವರಿ 2010 ರೊಳಗೆ ನಡೆದು ಮಾರ್ಚಿ 2010ರ ಮೊದಲ ವಾರದಲ್ಲಿ ಬಹುಮಾನಗಳನ್ನು ಬ್ಲಾಕ್ ಹಂತದಲ್ಲಿ ನೀಡುವಂತೆ ವ್ಯವಸ್ಥೆಗೊಳಿಸಲು ಬಿ.ಇ.ಓ./ಬಿ.ಆರ್.ಸಿ. ಕ್ರಮ ಜರುಗಿಸತಕ್ಕದ್ದು.

ಆಯ್ಕೆಯ ಮಾನದಂಡಗಳನ್ನು ಕೆಳಕಂಡ ನೇರದಲ್ಲಿ ರಚಿಸಿಕೊಳ್ಳಬಹುದು. ಮೀನಾ ಸಂಘಗಳ ಕಾರ್ಯಕ್ರಮ ಯೋಜನೆ – ಅನುಷ್ಠಾನ – ವಿಶೇಷವಾಗಿ ಮಕ್ಕಳ ಧಾರಣಕ್ಕೆ ಮಾಡಿದ ಕೆಲಸಗಳು; ಸಮುದಾಯದಲ್ಲಿ ಜಾಗೃತಿಗಾಗಿ ಮಾಡಿದ ಕೆಲಸಗಳು, ಬಾಲಕಾರ್ಮಿಕ ಸಮಸ್ಯೆ ಮತ್ತು ಬಾಲ್ಯ ವಿವಾಹ ದಂತಹ ಅಪಪದ್ಧತಿಗಳ ಕುರಿತು ಕೈಗೊಂಡ ಚಟುವಟಿಕೆಗಳು; ಆರೋಗ್ಯ ಮತ್ತು ನೈರ್ಮಲ್ಯಕ್ಕೆ ಮಾಡಿದ ಕೆಲಸಗಳು; (ಪ್ರಚಾರಕ್ಕೆ ಅನುಸರಿಸಿದ ಕಾರ್ಯತಂತ್ರಗಳು ಮತ್ತು ಅವುಗಳಲ್ಲಿ ಮಕ್ಕಳು ಸಾಧಿಸಿದ ನೈಪುಣ್ಯತೆ ಇತ್ಯಾದಿ ಅಂಶಗಳನ್ನು ಗಮನದಲ್ಲಿಟ್ಟು – ಯುಕ್ತ ಗುರುತ್ವ (Weightage) ನೀಡಿ ಆಯ್ಕೆ ಮಾಡುವುದು).

ಇ. ಮೌಲ್ಯಮಾಪನ/ಸೇತುಬಂಧ/ಪರ್ಯಾಯ ಶಿಕ್ಷಣ : **ಒಟ್ಟು ಅನುದಾನ ರೂ.20,000/-**

ಈ ಶೀರ್ಷಿಕೆಯಲ್ಲಿ ಕೆಳಕಂಡ ಉಪ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳಲಾಗುತ್ತದೆ.

✓ **ಕ್ಷೇತ್ರ ಅಧ್ಯಯನ ಮತ್ತು ಅನುಭವ ಹಂಚಿಕೆ :**

ತರಗತಿಯಲ್ಲಿ ಪಡೆದ ಜ್ಞಾನವನ್ನು ಕ್ಷೇತ್ರ ಮಟ್ಟದಲ್ಲಿ ತಾಳೆ ನೋಡುವುದರಿಂದ / ಅಧ್ಯಯನ ಮಾಡುವುದರಿಂದ ಗಳಿಸಿದ ಜ್ಞಾನ ಸ್ಥಾಯಿಯಾಗಿ ಉಳಿಯುತ್ತದೆ. ಈ ನಿಟ್ಟಿನಲ್ಲಿ ಕ್ಷೇತ್ರ ಅಧ್ಯಯನಗಳ ಪಾತ್ರ ಹಿರಿದು. ಜೊತೆಗೆ ಕ್ಷೇತ್ರ ಅಧ್ಯಯನದ ತರುವಾಯ ಮಗು ಪಡೆದ ಅನುಭವ ವಿನಿಮಯ ಜ್ಞಾನದ ವಿವಿಧ ಮಜಲುಗಳನ್ನು ಸಮರ್ಥವಾಗಿ ಪರಿಚಯ ಮಾಡಿಕೊಳ್ಳಲು ಸಾಧ್ಯವಾಗುತ್ತದೆ.

ಪ್ರತಿ ಮಾದರಿ ಕ್ಲಸ್ಟರ್ ಶಾಲೆಗೆ ಮಂಜೂರಾಗಿರುವ ಹಣವನ್ನು ಹಿಂಬದಿ ಶಾಲೆಯ 3 ರಿಂದ 8ನೇ ತರಗತಿವರೆಗೆ ಇರುವ ಹೆಣ್ಣು ಮಕ್ಕಳ ಸರಾಸರಿ ಹಾಜರಾತಿಯನ್ನು ಅನುಸರಿಸಿ ಸಮವಾಗಿ ಹಂಚಿಕೆ ಮಾಡುವುದು. ಇದು ಜೂನ್ 2010ರೊಳಗೇ ಜರುಗಬೇಕು.

ಈ ಹಣವನ್ನು ಬಳಸಿ ಪ್ರತಿ ತಿಂಗಳೂ ಒಂದು ಕ್ಷೇತ್ರ ಅಧ್ಯಯನವನ್ನು ಕೆಲವು ತರಗತಿಯ ಮಕ್ಕಳು ಮಾಡಲಿ. ಹತ್ತಿರದ ಸ್ಥಳಗಳಿಗೆ ಮಕ್ಕಳನ್ನು ಕರೆದೊಯ್ಯಲಿ. ಕ್ಷೇತ್ರ ಭೇಟಿಗಳನ್ನು – ಭೌಗೋಳಿಕ, ಐತಿಹಾಸಿಕ, ಧಾರ್ಮಿಕ, ಶೈಕ್ಷಣಿಕ, ವೈಜ್ಞಾನಿಕವಾಗಿ ಪ್ರಮುಖ ಎನಿಸುವ ಸ್ಥಳಗಳಿಗೆ ಹಾಗೂ ವಿವಿಧ ಕಸುಬು ಮತ್ತು ಕಚೇರಿಗಳನ್ನು ಭೇಟಿ ಮಾಡಲು ವ್ಯವಸ್ಥೆಗೊಳಿಸಬಹುದು. ಕ್ಷೇತ್ರ ಭೇಟಿಯ ನಂತರ ಮಕ್ಕಳ ಅನುಭವಗಳನ್ನು ದಾಖಲಿಸಲು ಒಂದು ಅನುಭವ ಹಂಚಿಕೆಯನ್ನು ಶಾಲಾ ಮಟ್ಟದಲ್ಲಿ ಏರ್ಪಡಿಸಬಹುದು. ಇಂತಹ ಅನುಭವ ಹಂಚಿಕೆಯ ಸಾರವನ್ನು ಶಾಲಾ ಹಂತದಲ್ಲಿ ಸಂಗ್ರಹಿಸಿ ದಾಖಲೀಕರಣ ಮಾಡಬಹುದು. ಇಲ್ಲಿ ಬರುವ ಖರ್ಚು ವೆಚ್ಚಗಳಿಗೆ ಇಲ್ಲಿ ನೀಡಿದ ಅನುದಾನವನ್ನು ಬಳಸಬಹುದು. ಈ ಉಪ ಕಾರ್ಯತಂತ್ರಕ್ಕೆ ರೂ.10,000/- ಪ್ರತಿ ಕ್ಲಸ್ಟರಿಗೆ ನಿಗಧಿಗೊಳಿಸಿದೆ.

✓ **ಹೆಣ್ಣು ಮಕ್ಕಳ ಮಾರ್ಗದರ್ಶಿ ಕೇಂದ್ರ :**

ನೀಡಿರುವ ಅನುದಾನವನ್ನು (ರೂ.10,000/- ಪ್ರತಿ ಕ್ಲಸ್ಟರಿಗೆ) ಹಿಂಬದಿ ಶಾಲೆಗಳ 06, 07, 08 ನೇ ಇಯತ್ತೆಯ ಹೆಣ್ಣು ಮಕ್ಕಳ ಸರಾಸರಿ ಹಾಜರಾತಿಯನ್ನು ಗುರುತಿಸಿ ಸಂವಾದಿಯಾಗಿ ಹಂಚಿ. ಹಂಚಿಕೆಯನ್ನು ಕ್ಲಸ್ಟರ್ ಹಂತದ ಎನ್.ಪಿ.ಇ.ಜಿ.ಇ.ಎಲ್. ಸಮಿತಿಯು ನಿರ್ವಹಿಸಬೇಕು.

ಈ ಅನುದಾನವನ್ನು ಬಳಸಿ ಹೆಣ್ಣು ಮಕ್ಕಳಿಗೆ ಅವಶ್ಯವೆನಿಸುವ ಆರೋಗ್ಯ, ಮಾರ್ಗದರ್ಶನ, ಶೈಕ್ಷಣಿಕ ಮಾರ್ಗದರ್ಶನ, ವೃತ್ತಿ ಮಾರ್ಗರ್ಶನವನ್ನು ಏರ್ಪಡಿಸಬಹುದು. ಈ ಕೇಂದ್ರದ ಉಸ್ತುವಾರಿಗಾಗಿ ಒಬ್ಬ ಮಹಿಳಾ ಅಧ್ಯಾಪಕರನ್ನು ಪ್ರಭಾರದಲ್ಲಿಡುವುದು. ಈ ಕೇಂದ್ರಗಳ ನಿರ್ವಹಣೆಯ ಜವಾಬ್ದಾರಿಯನ್ನು ಮೀನಾ ತಂಡಗಳು ಮಾಡುವಂತೆ ವ್ಯವಸ್ಥೆಗೊಳಿಸಬೇಕು. ಈ ಕಾರ್ಯದ ಜವಾಬ್ದಾರಿ ಪಡೆದ ಅಧ್ಯಾಪಕರು ಮೀನಾ ಗುಂಪಿನ ಅಥವಾ ಇನ್ನಿತರ ಮಕ್ಕಳ ಸಹಾಯ ಪಡೆದು ವಿವಿಧ ಚಟುವಟಿಕೆಗಳನ್ನು ಇಡೀ ಶೈಕ್ಷಣಿಕ ವರ್ಷಕ್ಕೆ ಸುಂಬಂಧಿಸಿದಂತೆ ಒಂದು ಕ್ರಿಯಾ ಯೋಜನೆ ಮಾಡಿ ಅದರಂತೆ ಅನುಷ್ಠಾನ ಮಾಡುವುದು.

ಮಾರ್ಗದರ್ಶನವು ಮಕ್ಕಳಲ್ಲಿ ಭರವಸೆ ತುಂಬುವಂತೆ ಇರಲಿ. ಇಲ್ಲಿನ ಅನುದಾನವನ್ನು ಸಂಪನ್ಮೂಲ ವ್ಯಕ್ತಿಗಳ ಪ್ರಯಾಣ ಮತ್ತು ಸಭೆಗಳ ಆಯೋಜನೆಯ ಸಾಂದರ್ಭಿಕ ವೆಚ್ಚಕ್ಕೆ ಉಪಯೋಗಿಸಬಹುದು.

**ಈ. ಮುಕ್ತ ಶಾಲೆಗಳ ಮೂಲಕ ಕಲಿಕೆ:** **ಒಟ್ಟು ಅನುದಾನ – ರೂ. 20,000/-**

ಈ ಕಾರ್ಯತಂತ್ರದ ಅಡಿಯಲ್ಲಿ 04 ಉಪ ಕಾರ್ಯ ತಂತ್ರಗಳನ್ನು ಅಳವಡಿಸಲಾಗಿದೆ.

✓ ನವೋದಯ ಪರೀಕ್ಷೆಗೆ ತಯಾರಿ – ರೂ. 3,000/-

✓ ಹೆಣ್ಣು ಮಕ್ಕಳ ಸಬಲೀಕರಣ – ರೂ. 6,000/-

✓ ಮೀನಾ ಚಟುವಟಿಕೆಗಳು – ರೂ. 10,000/-

✓ ಸಹಪಠ್ಯ ಚಟುವಟಿಕೆಗಳು - ರೂ. 1,000/-

✓ ನವೋದಯ ಪರೀಕ್ಷೆಗೆ ನೀಡಲಾಗಿರುವ ಅನುದಾನವನ್ನು ಬಳಸಿ ಹೆಣ್ಣು ಮಕ್ಕಳನ್ನು ನವೋದಯ ಪರೀಕ್ಷೆಗೆ ತಯಾರಿ ಮಾಡುವುದು. ಈ ಪರೀಕ್ಷೆಗೆ ಬೇಕಾದ ಪುಸ್ತಕಗಳು ಮತ್ತು ಸಂಪನ್ಮೂಲ ವ್ಯಕ್ತಿಗಳಿಗೆ ಸಂಭಾವನೆಯನ್ನು ನೀಡಬಹುದು. ಶಾಲೇತರ ಅವಧಿಯಲ್ಲಿ ಮಕ್ಕಳನ್ನು ಪರೀಕ್ಷೆಗೆ ತಯಾರಿ ನಡೆಸಲು ಪಾಲ್ಗೊಂಡ ಶಿಕ್ಷಕರಿಗೆ ಗೌರವ ಧನವನ್ನು ಕೂಡ ಇದರಿಂದ ಭರಿಸಬಹುದು.

ಕನಿಷ್ಠ 03 ಶಾಲೆಗಳಿಗೆ ತಲಾ ಒಂದು ಸಾವಿರದಂತೆ ಈ ಹಣವನ್ನು ಹಂಚಬೇಕು. ಹಣ ಹಂಚಿಕೆಯನ್ನು ಎನ್.ಪಿ.ಇ.ಜಿ.ಇ.ಎಲ್. ಕ್ಲಸ್ಟರ್ ಸಮಿತಿ ನಿರ್ಧಾರ ಮಾಡುವುದು.

ಮುಂದಿನ ವರ್ಷಗಳಲ್ಲಿ ಈ ಬಾಬ್ತಿನ ಅನುದಾನ ದೊರೆತಲ್ಲಿ ಬೇರೆ ಶಾಲೆಗಳನ್ನು ಈ ಚಟುವಟಿಕೆಗಾಗಿ ಆಯ್ಕೆ ಮಾಡಿಕೊಳ್ಳಬಹುದು.

ಪರೀಕ್ಷೆಗೆ ಮುನ್ನ ಕನಿಷ್ಠ 60 ದಿನಗಳನ್ನು 5ನೇ ತರಗತಿಯ ಹೆಣ್ಣು ಮಕ್ಕಳಿಗೆ ಪರೀಕ್ಷೆಯ ತಯಾರಿಯನ್ನು ಶಾಲೇತರ ಅವಧಿಯಲ್ಲಿ ಕನಿಷ್ಠ ದಿನ ಒಂದಕ್ಕೆ ಕನಿಷ್ಠ 01 ಗಂಟೆ ತರಬೇತಿಯನ್ನು ನೀಡುವುದು.

✓ ಹೆಣ್ಣು ಮಕ್ಕಳ ಸಬಲೀಕರಣಕ್ಕಾಗಿ ನೀಡಿರುವ ಅನುದಾನವನ್ನು ಎನ್.ಪಿ.ಇ.ಜಿ.ಇ.ಎಲ್. ಕ್ಲಸ್ಟರ್ ಹಂತದ ಸಮಿತಿಯಲ್ಲಿ ತೀರ್ಮಾನಿಸಿ ಕನಿಷ್ಠ 06 ಶಾಲೆಗಳಿಗೆ ಹೆಣ್ಣು ಮಕ್ಕಳ ಹಾಜರಾತಿಯನ್ನು ಅನುಸರಿಸಿ ನೀಡುವುದು. ಈ ಹಣವನ್ನು ಬಳಸಿ ಹೆಣ್ಣು ಮಕ್ಕಳ ಸಬಲೀಕರಣಕ್ಕಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದು. ಕಾರ್ಯಕ್ರಮದಲ್ಲಿ ಭಾಗವಹಿಸುವ ಸಂಪನ್ಮೂಲ ವ್ಯಕ್ತಿಗಳ ಗೌರವಧನ, ಪ್ರಯಾಣ ಭತ್ಯೆ ಮತ್ತು ಇತರ ಸಾಂಧರ್ಭಿಕ ವೆಚ್ಚಗಳಿಗಾಗಿ ಈ ಹಣವನ್ನು ಬಳಸಬಹುದು.

ಈ ಕಾರ್ಯಕ್ರಮದ ಅಡಿಯಲ್ಲಿ ಕರಾಟೆ, ಸೈಕಲ್ ತುಳಿಯುವುದು, ಮೊಪೆಡ್ ಸವಾರಿ(ಶಾಲಾವರಣದಲ್ಲಿ ಮಾತ್ರ), ಈಜು, ವ್ಯಕ್ತಿತ್ವ ವಿಕಸನ, ಗಣಕ ಕೋರ್ಸುಗಳು, ಸಂಸ್ಕೃತ/ಕನ್ನಡ/ಹಿಂದಿ ಪರೀಕ್ಷೆಗಳನ್ನು ಕಟ್ಟಿಸುವುದು, ಸಂಗೀತ/ನೃತ್ಯ/ ನಾಟಕ ಅಭ್ಯಾಸ ಇಂತಹ ವಿಷಯಗಳಲ್ಲಿ ಪರಿಣತಿ ಹೊಂದುವಂತೆ ಮಾಡುವುದನ್ನು ಹೆಣ್ಣು ಮಕ್ಕಳ ಸಬಲೀಕರಣದಡಿಯಲ್ಲಿ ಗ್ರಹಿಸಲಾಗಿದೆ. ಈ ಎಲ್ಲಾ ಕಾರ್ಯಕ್ರಮಗಳು ವಿದ್ಯಾರ್ಥಿನಿಯರ ವ್ಯಕ್ತಿತ್ವವನ್ನು ಬೆಳೆಸುವಲ್ಲಿ ಸಹಕಾರಿಯಾಗಿದೆ. ಇವು ಸಾಮಾನ್ಯವಾಗಿ ಶಾಲಾ ಪಠ್ಯಕ್ರಮಕ್ಕಿಂತ ಭಿನ್ನವಾದ ಚಟುವಟಿಕೆಗಳಾಗಿರುತ್ತವೆ.

✓ **ಎನ್.ಪಿ.ಇ.ಜಿ.ಇ.ಎಲ್. ಕ್ಲಸ್ಟರಿನ ಎಲ್ಲಾ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಮೀನಾ ತಂಡಗಳನ್ನು ಈ ಬಾರಿ ರಚಿಸಲು ಸೂಚಿಸಲಾಗಿದೆ.** ಈ ಉಪಕಾರ್ಯ ತಂತ್ರದಲ್ಲಿ ಲಭ್ಯವಿರುವ ಅನುದಾನವನ್ನು ಕ್ಲಸ್ಟರ್ ವ್ಯಾಪ್ತಿಯ ಹಿರಿಯ ಪ್ರಾಥಮಿಕ ಶಾಲೆಗಳ ಹೆಣ್ಣು ಮಕ್ಕಳ ಸರಾಸರಿ ಹಾಜರಾತಿ ಪ್ರಮಾಣವನ್ನು ಅನುಸರಿಸಿ ಹಣವನ್ನು ಎಲ್ಲಾ ಹಿರಿಯ ಪ್ರಾಥಮಿಕ ಶಲೆಗಳಿಗೆ ಅನುಪಾತವಾಗಿ ಹಂಚುವುದು. ಎಲ್ಲಾ ವಿಧದ ಹಣಕಾಸಿನ ಹಂಚಿಕೆಯನ್ನು ಎನ್.ಪಿ.ಇ.ಜಿ.ಇ.ಎಲ್. ಕ್ಲಸ್ಟರ್ ನಿರ್ವಹಣಾ ಸಮಿತಿ ನಿರ್ವಹಿಸತಕ್ಕದ್ದು.

ಮೀನಾ ಗುಂಪುಗಳು ಹೆಣ್ಣು ಮಕ್ಕಳ ಸಬಲೀಕರಣದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಹೆಣ್ಣು ಮಕ್ಕಳ ಸಮಸ್ಯೆ, ಹೆಣ್ಣು ಮಕ್ಕಳ ಶಿಕ್ಷಣ ಕುರಿತಂತೆ ಚರ್ಚೆ, ವಿಚಾರ ಗೋಷ್ಠಿ, ನಾಟಕ, ಪಾತ್ರಾಭಿನಯ, ಬೀದಿ ನಾಟಕ, ಮೇಳಗಳು ಮುಂತಾದ ಕಾರ್ಯ ಕ್ರಮಗಳನ್ನು ನಡೆಸುವುದು. ಶಾಲೆಯಲ್ಲಿ ಜರುಗುವ ವಿವಿಧ ಕಾರ್ಯಕ್ರಮಗಳಲ್ಲಿ ಈ ತಂಡದ ಮಕ್ಕಳು ಭಾಗಿಯಾಗುವಂತೆ ಗಮನ ಹರಿಸುವುದು. ಮಾರ್ಗದರ್ಶನ ಕೇಂದ್ರಗಳನ್ನು ನಿರ್ವಹಿಸುವ ಜವಾಬ್ದಾರಿಯನ್ನು ಈ ಮಕ್ಕಳಿಗೆ ಕೊಡುವುದು.

ಶಾಲಾ ಹಂತದಲ್ಲಿ ತಿಂಗಳಿಗೆ ಕನಿಷ್ಟ ಒಂದು ಕಾರ್ಯಕ್ರಮವನ್ನು ನಡೆಸಲು ಅವಕಾಶ ಮಾಡಿಕೊಡಿ. ಅಂತಹ ಅಂತರ ಶಾಲಾ ಮೀನಾ ತಂಡಗಳ ಕಾರ್ಯಕ್ರಮ ನಡೆಸಲು ಸಿ.ಎ.ಇ.ಓ. ಜವಾಬ್ದಾರಿ ವಹಿಸುವುದು. ಇದೇ ರೀತಿ ಬ್ಲಾಕ್ ಹಂತದಲ್ಲಿ ಮೀನಾ ತಂಡದ ಮೇಳಗಳನ್ನು ಬಿ.ಇ.ಓ. ಮತ್ತು ಬಿ.ಆರ್.ಸಿ.ರವರು ವರ್ಷಾಂತ್ಯದೊಳಗೆ ನಡೆಸುವುದು. ಇಂತಹ ಮೇಳಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ, ವಿಚಾರ ಗೋಷ್ಠಿಗಳು, ಮಕ್ಕಳು ಮಾಡಿದ ಸಾಧನೆ, ಇತ್ಯಾದಿ ಸಂಗತಿಗಳ ಪ್ರದರ್ಶನಕ್ಕೆ ಒತ್ತು ಕೊಡುವುದು.

ಲಭ್ಯ ಅನುದಾನವನ್ನು ಮೀನಾ ತಂಡದ ಚಟುವಟಿಕೆಗಳನ್ನು ಸಾಂದರ್ಭಿಕ ವೆಚ್ಚ ಮತ್ತು ಪ್ರಯಾಣ ವೆಚ್ಚಕ್ಕಾಗಿ ಬಳಸಬಹುದು.

✓ **ಸಹ ಪಠ್ಯ ಚಟುವಟಿಕೆಗಳು:** ಪ್ರತಿ ಮಾದರಿ ಕ್ಲಸ್ಟರ್‌ಗೆ ರೂ. 1,000/- ನೀಡಲಾಗಿದೆ. ಈ ಹಣವನ್ನು ಮಾದರಿ ಕ್ಲಸ್ಟರ್ ಶಾಲೆಯಲ್ಲಿಯೇ ಉಳಿಸಿಕೊಂಡು ಕ್ಲಸ್ಟರ್ ಹಂತದಲ್ಲಿ ನಡೆಯುವಂತೆ ಹಿಂಬದಿ ಶಾಲೆಗಳ ಹೆಣ್ಣು ಮಕ್ಕಳ ಸಾಂಸ್ಕೃತಿಕ ಕಾರ್ಯ ಕ್ರಮಗಳಿಗೆ ಬಳಸಬಹುದು.

ಮೇಲೆ ತಿಳಿಸಿದ ಮೀನಾ ತಂಡದ ಅಂತರ ಶಾಲಾ ಕಾರ್ಯಕ್ರಮಗಳು ಮತ್ತು ಇತರ ಅಂತರ ಶಾಲಾ ಸಾಂಸ್ಕೃತಿಕ ಚಟುವಟಿಕೆಗಳಿಗೂ ಕೂಡ ಹಣವನ್ನು ಉಪಯೋಗಿಸಬಹುದು.

**ಉ. ಸಮುದಾಯ ಸಂಚಲನೆ :** **ಒಟ್ಟು ಅನುದಾನ – ರೂ. 3,800/-**

ಸಮುದಾಯ ಸಂಚಲನದಲ್ಲಿ ಎರಡು ಸಂಗತಿಗಳಿವೆ. ಮೊದಲನೆಯದು ಹೆಣ್ಣು ಮಕ್ಕಳ ಶಿಕ್ಷಣ ಕುರಿತಂತೆ ಸಮುದಾಯದಲ್ಲಿ ಜಾಗೃತಿ ಮೂಡಿಸುವುದು. ಎರಡನೆಯದು ಜಾಗೃತಿ ಮೂಡಿಸಿದ ಸಂಚಲನವನ್ನು ಶಿಕ್ಷಣ ವ್ಯವಸ್ಥೆ ಧಾರಣ ಮಾಡಿಕೊಳ್ಳಬೇಕಾದ ಸನ್ನಿವೇಶವನ್ನು ನಿರ್ಮಿಸುವುದು.

**ಜಾಗೃತಿ ಕಾರ್ಯಕ್ರಮಗಳು** – ಹೆಣ್ಣು ಮಕ್ಕಳ ದಾಖಲಾತಿಗೆ ತಾತ್ಸಾರ, ಹೆಣ್ಣು ಮಕ್ಕಳು ಗೈರುಹಾಜರಿ ಆಗುತ್ತಿರುವ ಸಂದರ್ಭಗಳು, ಬಾಲ್ಯ ವಿವಾಹ ಕುರಿತಂತೆ ವಿಶೇಷ ಅಗತ್ಯವುಳ್ಳ ಮಕ್ಕಳ ಶಿಕ್ಷಣ ಮುಂತಾದ ಕ್ಷೇತ್ರಗಳಲ್ಲಿ ಸಮುದಾಯವನ್ನು ತಲುಪುವಂತಹ ಕಾರ್ಯಕ್ರಮಗಳಾಗಿರುವುದು ಒಳ್ಳೆಯದು. ಆದ್ದರಿಂದ ಇಂತಹ ಸ್ಥಳಗಳಲ್ಲಿ ಜಾಗೃತಿ ಮೂಡಿಸುವ ಕೆಲಸವನ್ನು ಯೋಜಿಸುವುದು. ತಮ್ಮ ಕ್ಲಸ್ಟರ್ ಹಂತದಲ್ಲಿ ಲಿಂಗ ತಾರತಮ್ಯ ನಿವಾರಣೆ ಕುರಿತು ಜಾಗೃತಿ ಉಂಟುಮಾಡುವುದು ಹಾಗೂ ಈ ಸಂಬಂಧ ಕಲಿಕಾ/ಬೋಧನಾ ಸಾಮಗ್ರಿಗಳನ್ನು ಬಳಸುವುದು ಹಾಗೂ ಪ್ರದರ್ಶಿಸುವುದು. ಮಾದರಿ ಕೇಂದ್ರದ ಮೀನಾ ತಂಡಗಳು ಮತ್ತು ಇತರ ಮೀನಾ ತಂಡಗಳು ಜೊತೆಗೂಡಿ ಇಂತಹ ಸಮಸ್ಯೆ ಇರುವ ಪ್ರದೇಶಗಳನ್ನು ಗುರುತಿಸಿ ಜಾಗೃತಿ ಉಂಟು ಮಾಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

ಇದಕ್ಕೆ ಮಂಜೂರಾಗಿರುವ ಅನುದಾನವನ್ನು ಇಡೀ ಕ್ಲಸ್ಟರ್ ವ್ಯಾಪ್ತಿಯಲ್ಲಿ ಸಮುದಾಯ ಜಾಗೃತಿಯನ್ನು ಉಂಟು ಮಾಡಲು ಕ್ಲಸ್ಟರ್ ಮಾದರಿ ಶಾಲೆ ಯೋಜಿಸತಕ್ಕದ್ದು. ಈ ಹಣದಿಂದ ಮಾದರಿ ಕ್ಲಸ್ಟರ್ ಕೇಂದ್ರದ ಕಾರ್ಯ ಚಟುವಟಿಕೆಗಳಿಗೆ ಬೇಕಾದ ಸಾದಿಲ್ವಾರು ಖರ್ಚನ್ನು ಭರಿಸಬಹುದು. ಎನ್.ಪಿ.ಇ.ಜಿ.ಇ.ಎಲ್. ಕಾರ್ಯಕ್ರಮ ನಡೆಯುವ ಸಭೆಗೆ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಪ್ರಯಾಣ ಮಾಡುವ ಸಂದರ್ಭದಲ್ಲಿ ಈ ಅನುದಾನದಿಂದ ಪ್ರಯಾಣ ವೆಚ್ಚವನ್ನು ಭರಿಸಬಹುದು.

ಜಾಗೃತಿಯುಂಟು ಮಾಡಿದ ಸಂಚಲನವನ್ನು ಧಾರಣ ಮಾಡಿಕೊಳ್ಳುವ ದೃಷ್ಟಿಯಿಂದ ಅಧ್ಯಾಪಕರು, ಸಮುದಾಯ, ಸಮುದಾಯ ಮುಖಂಡರು ಇವರ ನಡುವೆ ವಿಚಾರ ವಿನಿಮಯ ಸಭೆಗಳನ್ನು ಏರ್ಪಡಿಸುವುದು. ಸ್ಥಳೀಯವಾಗಿ ಕಂಡುಬರುವ ಸಮಸ್ಯೆಗಳನ್ನು ಅಲ್ಲಿನ ಇತಿ ಮಿತಿಯಲ್ಲಿ ಬಗೆಹರಿಸಲು ಇಂತಹ ವಿಚಾರ ವಿನಿಮಯಗಳು ಸಹಾಯಕವಾಗಬೇಕು. ಇಂತಹ ಕಾರ್ಯಕ್ರಮಗಳಿಗೆ ಕೂಡ ಈ ಅನುದಾನವನ್ನು ಬಳಸಬಹುದು.

**ಲಿಂಗ ಸಂಯೋಜಕರ ಜವಾಬ್ದಾರಿ :**

ಲಿಂಗ ಸಂಯೋಜಕರ ಪಾತ್ರ ಹೆಣ್ಣು ಮಕ್ಕಳ ಶಿಕ್ಷಣದಲ್ಲಿ ಪ್ರಧಾನವಾದ ಅಂಶವಾಗಿದೆ. ಇವರ ಕಾರ್ಯ ನಿರ್ವಹಣೆ ಕುರಿತು ದಿನಾಂಕ : 11.5.2006 ರಂದು ಈ ಕಛೇರಿಯಿಂದ ಮಾರ್ಗಸೂಚಿಯನ್ನು ನೀಡಲಾಗಿದೆ. ಇದರ ಅನುಸಾರ ಜಿಲ್ಲೆ, ಬ್ಲಾಕ್, ಕ್ಲಸ್ಟರ್ ಮತ್ತು ಗ್ರಾಮ ಹಂತದಲ್ಲಿ ಜೆಂಡರ್ ಸಮಿತಿಗಳನ್ನು ರಚಿಸಬೇಕಾಗಿರುತ್ತದೆ. ಹಾಗೂ ಇವುಗಳು ಸರಿಯಾಗಿ ಕಾರ್ಯನಿರ್ವಹಿಸುವಂತೆ ಉಸ್ತುವಾರಿಯನ್ನು ಆಯಾ ಹಂತದ ಅಧಿಕಾರಿಗಳು ನಿರ್ವಹಿಸತಕ್ಕದ್ದು. ಲಿಂಗ ಸಂಯೋಜಕರು ಶಾಲೆಯಿಂದ ಹೊರಗಡೆ ಉಳಿಯುವ ಹೆಣ್ಣು ಮಕ್ಕಳ ಕುರಿತು ವಿಶೇಷವಾದ ಗಮನ ನೀಡುವುದು. ಮಹಿಳಾ ಸಂಘಗಳ ನೆರೆ ಹೊರೆ ನಾಯಕಿಯರು ಮತ್ತು ಶಿಕ್ಷಕರು ಸಮಿತಿಗಳ ನೆರವನ್ನು ತಮ್ಮ ವಿವಿಧ ಕಾರ್ಯ ಚಟುವಟಿಕೆಗಳ ಯಶಸ್ವಿಗಾಗಿ ಪಡೆಯುವುದು. ಎನ್.ಪಿ.ಇ.ಜಿ.ಇ.ಎಲ್. ಕಾರ್ಯಕ್ರಮಕ್ಕೆ

ಸಂಬಂಧಪಟ್ಟಂತೆ ತಮ್ಮ ವ್ಯಾಪ್ತಿಯಲ್ಲಿ ನಡೆಯುವ ಎಲ್ಲಾ ಕಾರ್ಯಕ್ರಮಗಳ ಉಸ್ತುವಾರಿಯನ್ನು ಹಾಗೂ ಯುಕ್ತ ಹಿಮ್ಮಾಹಿತಿಯನ್ನು ಕಾಲ ಕಾಲಕ್ಕೆ ಕಳುಹಿಸುವುದು.

**ಪ್ರತಿ ತಿಂಗಳು ಈ ಕಾರ್ಯಕ್ರಮದ ಅಡಿಯಲ್ಲಿ ಆಗಿರುವ ಪ್ರಗತಿಯನ್ನು ಕೇಂದ್ರ ಕಛೇರಿಗೆ ಅನುಬಂಧದಲ್ಲಿ ನೀಡಿರುವ ನಮೂನೆಯಂತೆ ವರದಿಯನ್ನು ತಪ್ಪದೇ ಸಲ್ಲಿಸುವುದು.**

ರಾಜ್ಯ ಯೋಜನಾ ನಿರ್ದೇಶಕರು
ಸರ್ವ ಶಿಕ್ಷಣ ಅಭಿಯಾನ

**ಪ್ರತಿಯನ್ನು** :

1. ರಾಜ್ಯದ ಎಲ್ಲಾ ಡಿ.ಡಿ.ಪಿ.ಐ.ಗಳಿಗೆ.
2. ರಾಜ್ಯದ ಎಲ್ಲಾ ಡಯಟ್ ಪ್ರಿನ್ಸಿಪಾಲರಿಗೆ ಮುಂದಿನ ಕ್ರಮಕ್ಕೆ.
3. ರಾಜ್ಯದ ಎಲ್ಲಾ ಡಿವೈಪಿಸಿಯವರಿಗೆ ಮುಂದಿನ ಕ್ರಮಕ್ಕೆ.
4. ರಾಜ್ಯದ ಎಲ್ಲಾ ಬಿಇಓ/ಬಿಆರ್‌ಸಿ ಗಳಿಗೆ ಮುಂದಿನ ಕ್ರಮಕ್ಕೆ. ನಿಮ್ಮ ವ್ಯಾಪ್ತಿಯ ಎಲ್ಲಾ ಪ್ರೌಢಶಾಲೆ ಮುಖ್ಯಸ್ಥರಿಗೆ ಮತ್ತು ಸಿ.ಆರ್.ಪಿ ಯವರಿಗೆ ಈ ಪತ್ರದ ಪ್ರತಿಗಳನ್ನು ಕಳುಹಿಸುವುದು.
5. ಈ ಕಛೇರಿಯ ಅಧಿಕಾರಿಗಳಿಗೆ ಮುಂದಿನ ಕ್ರಮಕ್ಕೆ.
6. ಲೆಕ್ಕ ಶಾಖೆ, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು.
7. ಕಾರ್ಯಪಾಲಕ ಅಭಿಯಂತರರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು.
8. ಜಿಲ್ಲಾ ಕಾರ್ಯಕ್ರಮ ಅಧಿಕಾರಿಗಳು, ಮಹಿಳಾ ಸಮಾಖ್ಯ, ಬಾಗಲಕೋಟೆ, ಬಳ್ಳಾರಿ, ಬೀದರ್, ಬಿಜಾಪುರ, ಕೊಪ್ಪಳ, ರಾಯಚೂರು ಗುಲ್ಬರ್ಗಾ.

**ಮಾಹಿತಿಗೆ ಕಳುಹಿಸಿದೆ:**

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ, ಧಾರವಾಡ.
2. ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ (ಪ್ರಾಥಮಿಕ ಶಿಕ್ಷಣ ; ಪ್ರೌಢಶಿಕ್ಷಣ ; ಡಿಎಸ್‌ಇಆರ್‌ಟಿ, ಅಲ್ಪಸಂಖ್ಯಾತ ಭಾಷೆಗಳು ; ಧಾರವಾಡ ; ಗುಲ್ಬರ್ಗಾ)
3. ವ್ಯವಸ್ಥಾಪಕರು, ಕರ್ನಾಟಕ ಪಠ್ಯ ಪುಸ್ತಕ ಸಂಘ, ಡಿ.ಎಸ್.ಇ.ಆರ್.ಟಿ., 100 ಅಡಿ ರಿಂಗ್ ರಸ್ತೆ, ಬನಸಂಕರಿ 3 ನೇ ಹಂತ, ಬೆಂಗಳೂರು.
4. ಸಹನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, [ಬೆಂಗಳೂರು ;ಬೆಳಗಾವಿ ;ಗುಲ್ಬರ್ಗಾ ;ಮೈಸೂರು ;(ವಿಭಾಗೀಯ ಕಛೇರಿಗಳು)- ಚಿತ್ರದುರ್ಗ ; ಮೈಸೂರು ;ಮಂಗಳೂರು ;ಬೆಳಗಾವಿ ; ಜಮಖಂಡಿ ;ಗುಲ್ಬರ್ಗಾ ;(ಶಿಕ್ಷಕರ ಸರ್ಕಾರಿ ಶಿಕ್ಷಣ ಕಾಲೇಜುಗಳ ಪ್ರಿನ್ಸಿಪಾಲರು)-ಶಾಲಾ ಶಿಕ್ಷಣ, ಸಿಪಿಐ ಕಚೇರಿ ಬೆಂಗಳೂರು ;ಎಸಿಪಿಐ ಕಛೇರಿ ಧಾರವಾಡ ; ಮಧ್ಯಾಹ್ನ ಉಪಹಾರ ಯೋಜನೆ ಬೆಂಗಳೂರು.]
5. ನಿರ್ದೇಶಕರು, ಮಹಿಳಾ ಸಾಮಖ್ಯ, ಜಯನಗರ, ಬೆಂಗಳೂರು.

**ಇವರಿಗೆ ಮಾಹಿತಿಗೆ ಸಲ್ಲಿಸಿದೆ :**

1. ಮಾನ್ಯ ಪ್ರಧಾನ ಕಾರ್ಯದರ್ಶಿಯವರು, (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ), ಕರ್ನಾಟಕ ಸರ್ಕಾರ, ಬಹುಮಹಡಿ ಕಟ್ಟಡ, ಡಾ. ಅಂಬೇಡ್ಕರ್ ರಸ್ತೆ, ಬೆಂಗಳೂರು.
2. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.

# ಅನುಬಂಧ

## ಎನ್.ಪಿ.ಇ.ಜಿ.ಇ.ಎಲ್.ಗೆ ಸಂಭಂದಿಸಿದಂತೆ ಪ್ರಗತಿ ಮಾಹಿತಿ ನಮೂನೆ.

| ಜಿಲ್ಲೆ | ನಡೆಸಿದ ಕಾರ್ಯಕ್ರಮದ ಹೆಸರು ಮತ್ತು ಸಂಖ್ಯೆ | ಬ್ಲಾಕ್ | ಭೌತಿಕ ಗುರಿ | ಆರ್ಥಿಕ ಗುರಿ | ಭೌತಿಕ ಸಾಧನೆ | ಆರ್ಥಿಕ ಸಾಧನೆ | ಫಲಾನುಭವಿಗಳು | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|---|
| | | | | | | | ಎಸ್.ಸಿ | | ಎಸ್.ಟಿ | | ಮುಸ್ಲಿಂ | | ಅಲ್ಪಸಂಖ್ಯಾಂತ | | ಹಿಂದುಳಿದ ವರ್ಗ | | ಇತರೆ | | ಒಟ್ಟು | |
| | | | | | | | ಗಂ | ಹೆ | ಗಂ | ಹೆ | ಗಂ | ಹೆ | ಗಂ | ಹೆ | ಗಂ | ಹೆ | ಗಂ | ಹೆ | ಗಂ | ಹೆ |
| | | | | | | | | | | | | | | | | | | | | |
| | | | | | | | | | | | | | | | | | | | | |
| | | | | | | | | | | | | | | | | | | | | |
| | | | | | | | | | | | | | | | | | | | | |